

‘ಸ್ಟಾಚಿಟಾರ್ಫೆಟಾ ಜಮೈಸೆನ್ಸಿಸ್’ ಎಂದು ವೈಜ್ಞಾನಿಕವಾಗಿ ಹೆಸರಿಸಲಾಗಿದೆ. ‘ಕರಿ ಉತ್ತರಾಣಿ’ ಇದರ ಸ್ಥಳೀಯ ಹೆಸರು. ಸಿದ್ಧ ವೈದ್ಯಕೀಯ ಅಭ್ಯಾಸದಲ್ಲಿ ಬಳಸಲಾಗುವ ಈ ಸಸ್ಯವನ್ನು ಹೊಟ್ಟೆ ನೋವು, ಅಲರ್ಜಿಗಳು, ಕೆಮ್ಮು ಮತ್ತು ಆಸ್ತಮಾ, ರಕ್ತ ಶುದ್ಧಿಕರಣ ಮಾಡಲು ಬಳಸಲಾಗುತ್ತದೆ. ಈ ಸಸ್ಯದ ಚಹಾ ದೇಹದ ಉಷ್ಣತೆ ಮತ್ತು ಜೀರ್ಣ ಸಂಬಂಧಿ ಸಮಸ್ಯೆಗಳನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಬ್ರಾಂಕೈಟಿಸ್, ಮಲಬದ್ಧತೆ, ಚರ್ಮದ ಹುಣ್ಣುಗಳು, ಜ್ವರ ಮತ್ತು ಭೇದಿಗೆ ನೋವು ನಿವಾರಕವಾಗಿ ಬಳಸಲಾಗುತ್ತದೆ. ಉರಿಯೂತ, ಬ್ಯಾಕ್ಟೀರಿಯಾ ವಿರೋಧಿ ಮತ್ತು ಹೆಪಟೋ ರಕ್ಷಣಾತ್ಮಕವಾಗಿ ಬಳಸಲಾಗುತ್ತದೆ. ಯಕೃತ್ತಿನ ಸಂಬಂಧಿತ ಸಮಸ್ಯೆಗಳನ್ನು ಪರಿಹರಿಸಲು ಸಾಂಪ್ರದಾಯಿಕವಾಗಿ ಬಳಸಲಾಗುತ್ತದೆ.

## ತೊಟ್ಟಿಲ ಮುಳ್ಳಿನ ಗಿಡ

ಇದರ ವೈಜ್ಞಾನಿಕ ಹೆಸರು ‘ಕ್ಯಾಪರಿಸ್ ಗ್ರಾಂಡಿಫ್ಲೋರಾ’. ‘ಲಾರ್ಜ್ ಪೆಟಲ್ ಕೇಪರ್’ ಎಂಬ ಆಂಗ್ಲ ಹೆಸರಿನ ಇದನ್ನು ಸ್ಥಳೀಯವಾಗಿ



‘ತೊಟ್ಟಿಲ ಮುಳ್ಳಿನ ಗಿಡ’ ಎನ್ನುತ್ತಾರೆ. ಈ ಜಾತಿಯ ಸಸ್ಯಗಳು ನೈಋತ್ಯ ಭಾರತದ ಕಡೆ ಹೆಚ್ಚು ಕಂಡುಬರುತ್ತವೆ.

ಸಾಂಪ್ರದಾಯಿಕ ಯುನಾನಿ ಮತ್ತು ಆಯುರ್ವೇದ ಔಷಧದಲ್ಲಿ ವ್ಯಾಪಕವಾಗಿ ಈ ಸಸ್ಯವನ್ನು ಬಳಸಲಾಗುತ್ತದೆ. ಇದರ ಹಣ್ಣಿನ ರಸವನ್ನು ಗಾಯಗಳು ಮತ್ತು ಹುಣ್ಣುಗಳಿಗೆ ಚಿಕಿತ್ಸೆ ನೀಡಲು ಹಾಗೂ ಭೇದಿ ಮತ್ತು ಜ್ವರಕ್ಕೆ ಚಿಕಿತ್ಸೆ ನೀಡಲು ಬಳಸಲಾಗುತ್ತದೆ. ಇದರ ಎಲೆಗಳನ್ನು ಬೇಯಿಸಿ ಸೂಪ್ ಮಾಡಿ ಚರ್ಮದ ದದ್ದುಗಳಿಗೆ ಚಿಕಿತ್ಸೆ ನೀಡಲು ಉಪಯೋಗಿಸಲಾಗುತ್ತದೆ. ಕೀಟಗಳ ಕಡಿತಕ್ಕೆ ಎಲೆಗಳು ಮತ್ತು ತಿರುಗಳನ್ನು ಪುಡಿ ಮಾಡಿ ಹಚ್ಚಲಾಗುತ್ತದೆ. ಕ್ವೆರ್ಸೆಟಿನ್ ಮತ್ತು ರುಟಿನ್‌ನಂತಹ ಉತ್ಕರ್ಷಣಾ ನಿರೋಧಕಗಳು ಇದರಲ್ಲಿ ಸಮೃದ್ಧವಾಗಿದ್ದು, ರಕ್ತಹೀನತೆ, ಸಂಧಿವಾತ ಮತ್ತು ಜಡಗಳಿಗೆ ಔಷಧವಾಗಿ ಬಳಸಲಾಗುತ್ತದೆ. ಹೊಟ್ಟೆನೋವು, ತಲೆ ತಿರುಗುವಿಕೆ, ವಾಂತಿ ಮೂತ್ರವರ್ಧಕ, ಆ್ಯಂಟಿಟ್ಯೂಮರ್, ಆ್ಯಂಟಿರುಮಾಟಿಕ್ ಮತ್ತು ಉಸಿರಾಟದ ತೊಂದರೆಗಳಲ್ಲಿ ಬಳಸಲಾಗುತ್ತದೆ.

ಬೆಟ್ಟದ ಮೇಲೆ ಸ್ಥಾಪಿತರಾಗಿರುವ ಕರಿವರದರಾಜ ಸ್ವಾಮಿ, ಆಂಜನೇಯ, ಗಣಪತಿ ದೇವಸ್ಥಾನದ ಕಟ್ಟೆಯ ಬಳಿ ಕುಳಿತು ಮಾಡುವ ಧ್ಯಾನ, ಎತ್ತರದ ಬಂಡೆಗಳ ಮೇಲಿನಿಂದ ಕಾಣುವ ದೂರದ ಹಳ್ಳಿಗಳು, ಕೆರೆಕಟ್ಟೆಗಳು, ಚಾಮರಾಜನಗರ ಹಾಗೂ ಗಿರಿಶ್ರೇಣಿಗಳು ಸದಾ ನೆನಪಿನಲ್ಲುಳಿಯುವ ಚಿತ್ರಣಗಳಾದಂತೆ, ವರ್ಣಮಯ ವಿವಿಧ ಹೂಗಳು ಪ್ರಕೃತಿಯ ಸೊಬಗು ಹಾಗೂ ಜೀವಂತಿಕೆಗೆ ಸಾಕ್ಷಿಯಾಗಿ ಮನದಲ್ಲುಳಿದಿವೆ.

ಅಂದಹಾಗೆ, ಕರಿವರದರಾಜ ಬೆಟ್ಟದಲ್ಲಿನ ಬೇಸಿಗೆ ಹೂಗಳ ಬಗೆಗೆ ಮಾಹಿತಿ ಕೇವಲ ಪರಿಚಯಾತ್ಮಕ. ಹೂಗಳನ್ನು ಔಷಧಿ ರೂಪದಲ್ಲಿ ಅಥವಾ ಇತರೆ ಬಳಕೆಗೆ ತಜ್ಞರ ಸಲಹೆ ಅವಶ್ಯಕ.

ಪ್ರತಿಕ್ರಿಯಿಸಿ: **feedback@sudha.co.in**

